ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 28/2011
ಪಿ.ಡಬ್ಲ್ಯೂ : 2

| | | |
|---|---|---|
| ಸಾಕ್ಷಿದಾರರ ಹೆಸರು | : | ಪುಷ್ಪರಾಜ್ |
| ತಂದೆಯ ಹೆಸರು | : | ಸುಂದರ ಪೂಜಾರಿ |
| ಪ್ರಾಯ | : | 39 ವರ್ಷ |
| ಉದ್ಯೋಗ | : | ಡಿ.ಡಿ.ಎಲ್.ಆರ್ ಪ್ರಭಾರ ಮಂಗಳೂರು |
| ವಾಸ | : | ಕುಂದಾಪುರ |

ದಿನಾಂಕಃ 04-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಮ್ ಎಮ್ ಎಚ್ ವಕೀಲರಿಂದ

ನಾನು ಈ ಕೇಸಿನ : ಸಾಕ್ಷಿದಾರ

ನಾನು ಮಂಗಳೂರಿನ ಪ್ರಭಾರ ಡಿ ಡಿ ಎಲ್ ಆರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ನಿ.ಪಿ. 1 ಸರ್ವೆ ನಂಬ್ರ 251 ಮೊಳಹಳ್ಳಿ ಗ್ರಾಮದ ನಕಾಶೆಯನ್ನು ನಮ್ಮ ಕಚೇರಿಯಲ್ಲಿ ತಯಾರಿಸಲಾಗಿರುತ್ತದೆ . ಈ ನಕಾಶೆ ತಯಾರಿಸಿದ ಸಂದರ್ಭದಲ್ಲಿ ನಾನು ಎ.ಡಿ.ಎಲ್ ಆರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಸದರಿ ದಾಖಲೆಯಂತೆ ಸರ್ವೆ ನಂಬ್ರ 251 ಮೊಳಹಳ್ಳಿ ಗ್ರಾಮದ ಮಂಜೂರಾತಿ ವಿಸ್ತೀರ್ಣ ಹಾಗೂ ಸ್ವಾಧೀನತೆಯ ವಿಸ್ತೀರ್ಣ ವ್ಯತ್ಯಾಸ ಇರುತ್ತದೆ. ಮಂಜೂರಾತಿಯಂತೆ ಸರ್ವೆ ನಂಬ್ರ 251 ರಲ್ಲಿ 17.92 ಎಕರೆ ಇರುತ್ತದೆ. ಸ್ವಾಧೀನತೆಯ ಪ್ರಕಾರ 16.23 ವಿಸ್ತೀರ್ಣ ಸಚ್ಚಿದಾನಂದ ಹೆಗ್ಡೆಯವರ ಹೆಸರಿನಲ್ಲಿ ಇರುತ್ತದೆ. ಈ ರೀತಿ ವ್ಯತ್ಯಾಸ ಇದೆ ಎಂದು ನಾನು ತಹಶೀಲ್ದಾರರವರಿಗೆ ವರದಿ ಕೊಟ್ಟಿರುತ್ತೇನೆ. ವರದಿಯ ಪೋಟೋ ಕಾಪಿ ಇದ್ದು ಸದರಿ ದಾಖಲೆಯನ್ನು ಗುರುತಿಸಿರುವುದಿಲ್ಲ.

ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ